**(ದಿನಾಂಕಃ 07-04-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

ಮುಂದುವರೆದ ಪಾಟಿ ಸವಾಲು ಃ ಶ್ರೀ ಪಿ.ಆರ್.ಸಿ. 2, 4, 6 ನೇ ಪ್ರತಿವಾದಿ ಪರ ವಕೀಲರಿಂದ -

ನಾನು 8 ನೇ ತರಗತಿ ವರೆಗೆ ಶಾಲೆ ಕಲಿತಿರುತ್ತೇನೆ. ಗುಡಸ ಗ್ರಾಮದಲ್ಲಿ ನನಗೆ ಹೊಲ ಮನೆ ಇರುತ್ತದೆ. ಗುಡಸ ಗಾರಮದ ಉತ್ತರ ಬದಿಗೆ ನಮ್ಮ ಮನೆ ಇದೆ ಎಂದರೆ ಸರಿ. ನಮ್ಮ ಮನೆಯಿಂದ 2 ಫರ್ಲಾಂಗ ಅಂತರದಲ್ಲಿ ಉತ್ತರಕ್ಕೆ 7 ನೇ ಪ್ರತಿವಾದಿ ಮನೆ ಇರುತ್ತದೆ ಎಂದರೆ ಸರಿ. ನ್ಯಾಯ ನಡೆದ ಜಮೀನಿನ ಆಜು ಬಾಜು ನನಗೆ ಸೇರಿದ 383 ರ ಸರ್ವೆ ನಂಬರಿನ ಜಮೀನು ಇರುತ್ತದೆ. ನನ್ನ ಜಮೀನಿನಿಂದ 200 ಮೀಟರ ಅಂತರದಲ್ಲಿ ಸರ್ವೆ ನಂ. 374 ರ ಜಮೀನು ಇರುತ್ತದೆ. ಸದ್ರಿ ಜಮೀನಿನ ಕ್ಷೇತ್ರ 8 ಗುಂಟೆ ಇರುತ್ತದೆ. ಸದ್ರಿ ಜಮೀನಿನ ಉತಾರ ನಾನು ನೋಡಿರುತ್ತೇನೆ. ಸದ್ರಿ ಜಮೀನನ್ನು ಭಕ್ಷೀಸು ಪತ್ರದ ನಾತೆಯಿಂದ 7 ನೇ ಪ್ರತಿವಾದಿ ಸಾಗು ಮಾಡುತ್ತಿದ್ದನು.

ಸರ್ವೆ ನಂ. 374 ಮತ್ತು 475 ರ ಜಮೀನುಗಳು 7 ನೇ ಪ್ರತಿವದಿಗಾೇ ಭಕ್ಷೀಸು ಪತ್ರದ ನಾತೆಯಿಂದ ಬಂದಿರುತ್ತವೆ. ಅಂತಹ ಭಕ್ಷೀಸು ಪತ್ರ ನಾನು ನೋಡಿರುತ್ತೇನೆ. ಅದು 1962 ರಲ್ಲಿ ಆಗಿದ್ದು ಇರುತ್ತದೆ. ಶೆಟ್ಟೆಪ್ಪ ಎಂಬಾತ ಬಸಪ್ಪನಿಗೆ ಭಕ್ಷೀಸು ಪತ್ರ ಬರೆದುಕೊಟ್ಟಿರುತ್ತಾನೆ. ಅಂತಹ ಭಕ್ಷೀಸು ಪತ್ರದಲ್ಲಿ 7 ನೇ ಪ್ರತಿವಾದಿಯ ಹೆಸರು ಬಸಪ್ಪ ಶಿವಪ್ಪ ಹರಿಜನ ಎಂದು ಇತ್ತು ಎಂದರೆ ಸರಿಯಲ್ಲ. ಸದ್ರಿ ಭಕ್ಷೀಸು ಪತ್ರದಲ್ಲಿ 7 ನೇ ಪ್ರತಿವಾದಿ ಶಿವಪ್ಪನ ಮಗ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ . ಮೇಲೆ ಹೇಳಿದ 2 ಸ್ವತ್ತುಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಆಸ್ತಿಗಳ ಸಂಬಂಧ ಭಕ್ಷೀಸು ಪತ್ರ ಮಾಡಿಕೊಟ್ಟಿರುವುದಿಲ್ಲ.

ಸದ್ರಿ ಸ್ವತ್ತುಗಳು ಶೆಟ್ಟೆಪ್ಪನ ಹಿರಿಯರ ಆಸ್ತಿಗಳು ಇದ್ದವು. ಶೆಟ್ಟೆಪ್ಪನ ತಮ್ಮ ಬಾಳಪ್ಪ ಎಂದರೆ ಸರಿ . ಬಾಳಪ್ಪನಿಗೆ ಗೂಳಪ್ಪ ಮತ್ತು ಮಾರುತಿ ಇಬ್ಬರು ಗಂಡು ಮಕ್ಕಳು ಕೆಂಪವ್ವ ಮತ್ತು ಲಕ್ಕ್ಮಿ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಹೆಣ್ಣು ಮಕ್ಕಳಾದ ಕೆಂಪವ್ವ ಮತ್ತು ಲಕ್ಕ್ಮಿ ಇವರು 40 ವರ್ಷಗಳ ಮೇಲೆ ಮದುವೆಯಾಗಿ ಗಂಡನ ಮನೆಯಲ್ಲಿರುತ್ತಾರೆ ಎಂದರೆ ಇರಬಹುದು. ಸದ್ರಿ ಶೆಟ್ಟೆಪ್ಪ ಮತ್ತು ಬಾಳಪ್ಪ ಇವರಿಗೆ ಸಹೋದರಿ ತಂಗೆವ್ವ ಎಂಬಾಕೆ ಇದ್ದು , ಆಕೆ ಗಂಡನ ಮನೆಯಲ್ಲಿ ಇರುತ್ತಾಳೆ ಎಂದರೆ ಸರಿ. ಬಾಳಪ್ಪನ ಮಕ್ಕಳಾದ ಗೂಳಪ್ಪ ಮತ್ತು ಮಾರುತಿ ಇಬ್ಬರೂ 25 ವರ್ಷಗಳಿಂದ ಮಿಲಿಟರಿ ಸೇವೆ ಮಾಡುತ್ತಿದ್ದಾರೆ ಎಂದರೆ ಸರಿ . ಮುಂದುವರೆದು ಹೋಗಿ ಬಂದು ಮಾಡುತ್ತಾರೆ . ಮಾರುತಿ ಎಂಬಾತ ಬೆಳಗಾವಿಯಲ್ಲಿರುತ್ತಾನೆ ಎಂದರೆ ಸರಿ . ಆತ ದಾವಾ ಜಮೀನಿಗೆ ಎಂದೂ ಬಂದಿಲ್ಲ ಎಂದರೆ ಸರಿಯಲ್ಲ.

ಶೆಟ್ಟೆಪ್ಪ ಭಕ್ಷೀಸು ಪತ್ರದಲ್ಲಿ ತನ್ನ ಪಾಲಿನ 2 ಭಾಗದಲ್ಲಿ 1 ಭಾಗವನ್ನು ಬಸಪ್ಪನ ಹೆಸರಿಗೆ ಮಾಡಿರುತ್ತಾನೆ ಎಂದರೆ ಸರಿ . ಶೆಟ್ಟೆಪ್ಪನ ಪಾಲಿನ ಅರ್ಧ ಹಿಸ್ಸೆಯನ್ನು ಬಸ್ಸಪ್ಪನಿಗೆ ಮಾಡಿರುತ್ತಾನೆ. ಶೆಟ್ಟೆಪ್ಪ ಮತ್ತು ಬಾಳಪ್ಪನ ನಡುವೆ ಭಕ್ಷೀಸು ಪತ್ರ ಆಗುವ ಪೂರ್ವದಲ್ಲಿ ಪಾಲು ಆಗಿರುತ್ತದೆ. ಸುಮಾರು 20 ವರ್ಷ ಮೇಲ್ಪಟ್ಟು ಅವರಿಬ್ಬರ ನಡುವೆ ಪಾಲು ಆಗಿರುತ್ತದೆ. ಆ ಬಗ್ಗೆ ನಾನು ಕಾಗದವನ್ನು ನೋಡಿರುತ್ತೇನೆ. ಅವರಿಬ್ಬರ ನಡುವೆ ನೊಂದು ಪಾಲು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಮವ್ವ 1957 ರಲ್ಲಿ ಹುಟ್ಟಿರುತ್ತಾಳೆ. ಅದೇ ರೀತಿ ತುಳಸವ್ವ ಮತ್ತು ಬಸವ್ವ ಯಾವಾಗ ಹುಟ್ಟಿರುತ್ತಾರೆ ಎಂದು ನಿಖರವಾಗಿ ನನಗೆ ಗೊತ್ತಿಲ್ಲ. ಅವರು ಜನಿಸಿದ ಬಗ್ಗೆ ದಾಖಲೆ ನೋಡಿರುತ್ತೇನೆ. ಸದ್ರಿ ಮೂವರು ಶೆಟ್ಟೆಪ್ಪನ ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶೆಟ್ಟೆಪ್ಪನ ಮೂವರು ಹೆಣ್ಣು ಮಕ್ಕಳು ಮತ್ತು 7 ನೇ ಪ್ರತಿವಾದಿ ಸುಮಾರು 35 ವರ್ಷಗಳಿಂದ ಕೂಡಿಯೇ ಇರುತ್ತಾರೆ. ಸದ್ರಿ 3 ಹೆಣ್ಣು ಮಕ್ಕಳು ಸುಮಾರು 40 ವರ್ಷಗಳಿಂದ ಮದುವೆಯಾಗಿ ಗಂಡನ ಮನೆಯಲ್ಲಿರುತ್ತಾರೆ ಎಂದರೆ ಸರಿ. ಮುಂದುವರೆದು 7 ನೇ ಪ್ರತಿವಾದಿ ಅವರ ಮದುವೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 1983 ರಲ್ಲಿ ಶೆಟ್ಟೆಪ್ಪ ತೀರಿಕೊಂಡಿರುತ್ತಾರೆ. ಶೆಟ್ಟೆಪ್ಪನ ತಮ್ಮ ಬಾಳಪ್ಪ 2008 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶೆಟ್ಟೆಪ್ಪನ ಮೂವರು ಹೆಣ್ಣು ಮಕ್ಕಳು ಮತ್ತು 7 ನೇ ಪ್ರತಿವಾದಿ ಕೂಡಿ ಇದ್ದ ಬಗ್ಗೆ ರೇಶನ ಕಾರ್ಡ ನೋಡಿರುತ್ತೇನೆ. ಬಸವ್ವ, ತುಳಸವ್ವ ಮತ್ತು ನ್ಯಾಮವ್ವ ಇವರುಗಳ ಹೆಸರು ದಾವಾ ಸ್ವತ್ತಿನ ಉತಾರಗಳಲ್ಲಿ 15-20 ವರ್ಷಗಳ ಹಿಂದೆ ಇತ್ತು .

1970 ನೇ ಸಾಲಿನಲ್ಲಿ ಸದ್ರಿ 3 ಹೆಣ್ಣು ಮಕ್ಕಳು 7 ನೆ ಪ್ರತಿವಾದಿ ಹೆಸರಿಗೆ ಹಕ್ಕು ಬಿಟ್ಟ ಪತ್ರವನ್ನು ಮಾಡಿ ಕೊಟ್ಟಿರುತ್ತಾರೆ. ಸದ್ರಿ ಕಾಗದ ನೊಂದು ಇರುತ್ತದೆ. ಅಂತಹ ನೊಂದು ಕಾಗದವನ್ನು ನಾನು ನೋಡಿರುತ್ತೇನೆ. ಸದ್ರಿ ಕಾಗದ ಮಾಡುವಾಗ ನರಸಣ್ಣವರ, ಈರಗೌಡ ಪಾಟೀಲ ಎಂಬುವವರು ಸಾಕ್ಷಿದಾರರು ಇದ್ದರು. ಶೆಟ್ಟೆಪ್ಪ ತೀರಿಕೊಂಡ ಬಳಿಕ ಆತನ ವಾರಸುದಾರನೆಂದು ಬಾಳಪ್ಪನ ಒಬ್ಬನ ಹೆಸರು ಮಾತ್ರ ದಾಖಲಾಗಿತ್ತು ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಸ್ವಪ್ನಾ ಬಾಳಪ್ಪನ ಸೊಸೆ ಎಂದರೆ ಸರಿ. ಬಾಳಪ್ಪ ಈಗ ತೀರಿಕೊಂಡಿರುತ್ತಾನೆ. ಆತ ಸಾಯುವ ವೇಳೆಗೆ 75 ವರ್ಷ ಆಗಿತ್ತು ಎಂದರೆ 60-65 ವಶಷ ಆಗಿತ್ತು ಎನ್ನುತ್ತಾರೆ. ಸದ್ರಿ ಬಾಳಪ್ಪನು ಹೊಲದಲ್ಲಿರುವ ಮನೆಯಲ್ಲಿ ತೀರಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಊರಿನಲ್ಲಿರುವ ಮನೆಯಲ್ಲಿ ತೀರಿಕೊಂಡಿರುತ್ತಾನೆ.

ದಾವಾ ಸ್ವತ್ತುಗಳ ದಕ್ಷಿಣಕ್ಕೆ ಕಿನಾಲು ಇರುತ್ತದೆ ಎಂದರೆ ಸರಿ. ಸದ್ರಿ ಸ್ವತ್ತುಗಳಿಗೆ ನೀರಾವರಿ ಸೌಲಭ್ಯ ಇರುತ್ತದೆ ಎಂದರೆ ಸರಿ. ಈಗ 10 ವರ್ಷಗಳಿಂದ ಕಿನಾಲುಗಳ ಸುತ್ತ ಮುತ್ತ ಇರುವ ಜಮೀನುಗಳಲ್ಲಿ ಕಬ್ಬು ಜೋಳ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. 475 ರ ಹೊಲದಲ್ಲಿ 1 ಬೋರು ಮತ್ತು ಬಾವಿ ಇರುತ್ತದೆ ಎಂದರೆ ಸರಿ. ಸದ್ರಿ ಜಮೀನಿನಲ್ಲಿ ಕಬ್ಬು ಬೆಳೆ ಇದೆ ಎಂದರೆ ಸರಿ. ಯಾರು ಕಬ್ಬು ಬೆಳೆಯುತ್ತಾರೊ ಅವರ ಹೆಸರಿಗೆ ಮಾತ್ರ ಲಾವಣಿ ಫಾರ್ಮ ಕೊಡುತ್ತಾರೆ ಎಂದರೆ ಸರಿ . ಮುಂದುವರೆದು ಬೇರೆಯವರ ಹೆಸರಿಗೂ ಕೊಡುತ್ತಾರೆ . ಸರ್ವೆ ನಂ. 475 ರ ಪೂರಾ ಜಮೀನಿನಲ್ಲಿ 6 ನೇ ಪ್ರತಿವಾದಿ ಕಬ್ಬು ಬೆಳೆಯುತ್ತಿರುತ್ತಾಳೆ ಎಂದರೆ ಸರಿ . ಮುಂದುವರೆದು ಈಗ್ಗೆ 5-6 ವರ್ಷಗಳಿಂದ ಬೆಳೆಯುತ್ತಿದ್ದಾಳೆ. ಅದೇ ರೀತಿ ಆಕೆಯೇ ಕಬ್ಬಿನ ಬಿಲ್ಲನ್ನು ಪಡೆದುಕೊಳ್ಳುತ್ತಿದ್ದಾಳೆ ಎಂದರೆ ಸರಿ. 2003 ರಲ್ಲಿ ಬಾಳಪ್ಪನು 6 ನೇ ಪ್ರತಿವಾದಿ ಹೆಸರಿಗೆ ಹಕ್ಕು ಬಿಟ್ಟ ಪತ್ರ ಮಾಡಿಕೊಟ್ಟಿರುತ್ತಾನೆ ಎಂದರೆ ಸುಳ್ಳು ಇರುತ್ತದೆ. ಹೊಲದಲ್ಲಿರುವ ಮನೆಯಲ್ಲಿ 6 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಮಕ್ಕಳು ವಾಸ ಇರುತ್ತಾರೆ ಎಂದರೆ ಸರಿಯಲ್ಲ, ಅಲ್ಲಿ ಶೆಡ ಮಾತ್ರ ಇರುತ್ತದೆ. ಸದ್ರಿ ಶೆಡ್ಡಿನಲ್ಲಿ 18-20 ವರ್ಷಗಳಿಂದ ಇರುತ್ತಾಳೆ ಎಂದರೆ ಈಗ್ಗೆ 5-6 ವರ್ಷಗಳಿಂದ ಇರುತ್ತಾರೆ. ಅಲ್ಲಿ ದನದ ಶೆಡ್ಡು ಇರುತ್ತದೆ ಎಂದರೆ ಸರಿ . ಅದನ್ನು 6 ನೇ ಪ್ರತಿವಾದಿ ಕಟ್ಟಿಸಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ.

ಗುಡಸ ಗ್ರಾಮದಲ್ಲಿ ನೀರಾವರಿ ಜಮೀನಿನ ಕಿಮ್ಮತ್ತು ಎಕರೆಗೆ 20-25 ಲಕ್ಷ ಇದೆ ಎಂದರೆ ಸಾಕ್ಷಿ 5-6 ಲಕ್ಷ ಇರುತ್ತದೆ ಎನ್ನುತ್ತಾರೆ. ನಾನು ನಮ್ಮ ಊರಿನಲ್ಲಿ 4-5 ವರ್ಷಗಳಿಂದ ಪಂಚಾಯತಿ ಚೇರಮನ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. 7 ನೇ ಪ್ರತಿವಾದಿ ಮತ್ತು ನಾನು ಇಬ್ಬರೂ ಕೂಡಿಯೇ ಇರುತ್ತೇವೆ ಎಂದರೆ ಸರಿಯಲ್ಲ. ಶೆಟ್ಟೆಪ್ಪನ ಮೂವರು ಹೆಣ್ಣು ಮತಕ್ಕಳು ಮತ್ತು 7 ನೇ ಪ್ರತಿವಾದಿ ಕಳೆದ 35 ವರ್ಷಗಳಿಂದ ಕೂಡಿಯೆ ಇದ್ದರು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಶೆಟ್ಟೆಪ್ಪನಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ಬಸಪ್ಪ ಈತನು 2 ಎಕರೆ ಜಮೀನಿನಲ್ಲಿ ಸಾಗು ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6 ಮತ್ತು 7 ನೇ ಪ್ರತಿವಾದಿಯರು ಬಡಿದಾಡಿಕೊಂಡ ವಿಚಾರವಾಗಿ ನಾನು ಠಾಣೆಗೆ ಹೋಗಿರುತ್ತೇನೆ. ಠಾಣೆಯಲ್ಲಿ ಜಮೀನಿನ ವಿಚಾರದಲ್ಲಿ ತನಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದು ಬಸಪ್ಪ ಬರೆದುಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. 2,4, 6 ನೇ ಪ್ರತಿವಾದಿಯರಿಗೂ ಮತ್ತು ನನಗೂ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ